ಹೀಗೆ ನಿತ್ಯದ ಕೆಲಸದಲ್ಲಿ ತೊಡಗಿದಳು. ಅಷ್ಟುಹೊತ್ತಿಗೆ ಮಧ್ಯಾಹ್ನದ ಬಾಂಗು ಕೇಳಿಸಿತು. ಆಗ ತನ್ನಷ್ಟಕ್ಕೆ ಅಂದುಕೊಂಡಳು:

"ಮೈಮೇಲಿನ ಕೊಳೆ ತೆಗೆಯೋಕೆ ಒಂದೆರಡು ತಂಬಿಗೆ ಹಾಯಾಗಿ ಸ್ನಾನಮಾಡಿ ಸ್ವಲ್ಪ ಮೈ ಏಕೆ ಹಗುರಾಗಿಸಿಕೊಳ್ಳಬಾರದು..." ಸಯೀದ, ಬಟ್ಟೆ ಕಳಚಿ ಮುಖತೊಳೆದಳು, ರೆಪ್ಪೆಯಡಿ ಕೂತ ಸೋಪಿನ ನೊರೆ ತೆಗೆದಳು. ಎಂದಿನಂತೆ ಖುಷಿಯಾಗಿ ಹಾಡು, ತನ್ನಷ್ಟಕ್ಕೆ ಗುಣುಗಿಕೊಳ್ಳುತ್ತಿದ್ದಳು.

"ಜೀವನರಾಗ... ಈ ಅನುರಾಗ...

ಮಧುರಾನಂದವಿದೆ ಬಾಳಿನ ಸ್ವರ್ಗವಿದೆ"

– ಹಾಡಿಕೊಳ್ಳುವಾಗ ಸ್ನಾನದ ಮನೆಗೆ ಯಾರೋ ಹೊಕ್ಕಿದ್ದಾರೆಂದು ಆಕೆಗೆ ಅನ್ನಿಸಿತು. ಯಾಕೆಂದರೆ, ಹಾಡುವ ದನಿ ಎಂದಿನ ಧ್ವನಿಯಂತಿರಲಿಲ್ಲ. ಅದೊಂದು ಮನಸ್ಸಿನಾಳದಿಂದ ಬಂದ ಅತ್ಯಂತ ಮಧುರ ದನಿ. ತಾನೇ ಎಂದೂ ಕೇಳಿರದ ದನಿ. ಆಕೆ ತಕ್ಷಣ ಕಣ್ಣಿಗಂಟಿದ ಸೋಪನ್ನು ನೀರು ಚಿಮುಕಿಸಿ ತೊಳೆದುಕೊಂಡು ಸ್ನಾನದ ಮನೆಯನ್ನೆಲ್ಲ ಒಮ್ಮೆ ನೋಡಿದಳು. ಮತ್ಯಾರಾದರೂ ಒಳಗೆ ನುಸುಳಿರಬಹುದೆಂದು ಎಲ್ಲೆಡೆ ಕಣ್ಣಾಡಿಸುತ್ತ, 'ದೇವರೆ, ಆ ಸೈತಾನನಿಂದ ರಕ್ಷಿಸು' ಎಂದು ಪ್ರಾರ್ಥಿಸಿದಳು. ಆದರೆ, ಎಂದಿನಂತೆ ಕಿಟಕಿಯನ್ನು ಭದ್ರವಾಗಿ ಹಾಕಿದೆ. ವಾಶ್‌ಬೇಸಿನ್ ಮೇಲೆ ಕನ್ನಡಿ ತೂಗಾಡುತ್ತಿದೆ. ಹಲ್ಲುಜ್ಜುವ ಬ್ರಶ್, ಸೋಪ್ ಇದ್ದಲ್ಲಿ ಇವೆ. ಅಲಮಾರಿನಲ್ಲಿ ತನ್ನ ಶುಭ್ರ ಬಟ್ಟೆ ಇಟ್ಟಲ್ಲೇ ಇವೆ. ಮತ್ತೆ ಮತ್ತೆ ಪ್ರಾರ್ಥನೆ ಗುಣುಗುತ್ತ ತನ್ನ ಸ್ನಾನವನ್ನು ಮುಂದುವರಿಸಿದ್ದಳು. ತನ್ನ ಮೈಮೇಲಿನಿಂದ ಬೀಳುವ ನೀರಹನಿ ಹೊರತಾಗಿ ಮತ್ತಾವ ಸದ್ದೂ ಕೇಳಲಿಲ್ಲ. ತನ್ನದು ಮಧುರ ದನಿ ಎನ್ನುವುದನ್ನು ಖಾತರಿಪಡಿಸಿಕೊಂಡು ಆಕೆ ಮತ್ತೊಮ್ಮೆ ಹಾಡಲು ಮಾಡಿದಳು.

"ಜೀವನರಾಗ ಈ ಅನುರಾಗ"

ಆಕೆಯ ದನಿ ಇದೀಗ ಇನ್ನಷ್ಟು ಕೋಮಲವಾಗಿತ್ತು, ಇನ್ನಷ್ಟು ನಯವಾಗಿತ್ತು, ಪ್ರಶಾಂತವಾಗಿತ್ತು. ಕಾಲನ್ನು ಉಜ್ಜುತ್ತಿದ್ದ ಆಕೆಯ ಕೈಯಲ್ಲಿದ್ದ ನಾರು ಹಾಗೆಯೇ ಹೆಪ್ಪುಗಟ್ಟಿತ್ತು. ಹಾಗೆ ಅವಳಿಗೆ ಕಿನ್ನರರಲ್ಲಿ ನಂಬಿಕೆಯೇನೂ ಇರಲಿಲ್ಲ, ಆದರೂ ಹೃದಯ ಬಡಿತ ಜೋರಾಗಿ ಭಯ ಹೆಚ್ಚಾಯಿತು. ಆಕೆ ತನ್ನಷ್ಟಕ್ಕೆ ತಾನೇ ಮೆದುದನಿಯಲ್ಲಿ 'ಸಯೀದಾ, ಸಯೀದಾ' ಎಂದು ಕರೆದುಕೊಂಡಳು. ಮತ್ತೆ ಮತ್ತೆ ಉಲಿದ ಆ ದನಿಯಲ್ಲಿ ಮಧುರತೆ ತುಂಬಿತ್ತು. ಸಂಪೂರ್ಣ ಅಪರಿಚಿತವಾಗಿತ್ತು. ಆಕೆ ತನ್ನ ದನಿಯನ್ನು ಹಾಡುವಂತೆ ಉನ್ಮಾದ, ಉತ್ಸಾಹದಲ್ಲಿ ಎತ್ತರಕ್ಕೇರಿಸಿದಳು. 'ಸಯೀದಾ, ಸಯೀದಾ...' ತುಂಬು ಖುಷಿ, ತುಳುಕುತ್ತಿತ್ತು.

ಆಕೆ ಇದ್ದಕ್ಕಿದ್ದಂತೆ ಜಾಗರೂಕಳಾದಳು.

"ಆಕಸ್ಮಿಕವಾಗಿ ಯಾರಾದರೂ ಇದನ್ನು ಕೇಳಿದರೆ ಗತಿ ಏನು? ಹಮೀದ್, ನೀನು ಏನಾದರೂ ಕಾರಣ ಹುಡುಕಿಕೊಂಡು ಮನೆಗೆ ಬಂದು ನನ್ನ ಹೆಸರನ್ನು ನಾನೇ ಕರೆಯುವುದು ನೋಡಿದರೆ ಏನೆಂದುಕೊಳ್ಳುತ್ತಿದ್ದೆ? ಇವಳಿಗೆ ಹುಚ್ಚು ಹಿಡಿದಿರಬೇಕು ಎಂದುತಾನೆ? ಹೀಗಾಗಿ, ನಾನು ಬಾಯಿಗೆ ಕಟ್ಟಿಗೆಯ ತುಂಡು ತುರುಕಿಕೊಂಡಂತೆ ಭಯದಲ್ಲಿ ನನ್ನ ನಾಲಿಗೆಯನ್ನು ಒಣಗಿಸಿಕೊಂಡೆ. ಕಿನ್ನರರ ಬಗ್ಗೆ ಹೇಳುವ ಕತೆಗಳು ನಿಜವೇ ಇರಬೇಕು. ಮತ್ತೆ ನನಗೆ ನಾನೇ ಹಾಡಿಕೊಂಡೆ: "ಬೆಳಗಿನ ದೇವನೊಡನೆ ಬಯಸುವ ಸಂಗ."

ಸ್ನಾನ ಮುಗಿಸಿ ಅಂಗವಸ್ತ್ರದಿಂದ ಮೈಯೊರಸಿಕೊಂಡೆ. ನಾನೆಷ್ಟು ಅಸ್ವಸ್ಥಳಾಗಿದ್ದೇನೆಂದರೆ ನನ್ನ ದಿನದ ಉಡುಗೆಯನ್ನು ತಳಕಂಬಳಕ ಹಾಕಿಕೊಂಡುಬಿಟ್ಟಿದ್ದೆ. ಬಾಗಿಲು ತೆರೆದವಳೆ ಕಿಟಕಿಯ ಬಳಿ ಓಡಿ ಜನ, ರಸ್ತೆ ನೋಡುತ್ತ ಸುರಕ್ಷಿತವಾಗಿದ್ದೇನೆ ಎಂದುಕೊಂಡೆ. ಮನಸ್ಸು ಹಗುರಾದಮೇಲೆ ಹಾಯಾಗಿ ಕುರ್ಚಿಯಲ್ಲಿ ಕೂತು ಕೂದಲು ಬಾಚಿಕೊಳ್ಳತೊಡಗಿದೆ. ಮನಸಿನೊಳಗಿನ ದನಿ ಓಗೊಟ್ಟು ಮತ್ತೆ ಹಾಡತೊಡಗಿದೆ.

'ಎಂಥ ಸುದಿನ ಈ ದಿನ'

ನಂಬಬಲ್ಲೆಯ ಹಮೀದ್. ನನ್ನ ದನಿ ಅದೆಷ್ಟು ಮೃದು ಮಧುರವಾಗಿತ್ತೆಂದರೆ ಸ್ವರ್ಗಸೀಮೆಯಿಂದ ಬಂದಂತೆ, ಎಂದೂ, ಎಲ್ಲೂ ಕೇಳಿರದ, ಕಂಡಿರದ ದಿವ್ಯದಂತೆ ಎಂದು ಅನ್ನಿಸುತ್ತಿತ್ತು. ಪ್ರಾಮಾಣಿಕವಾಗಿ ಹೇಳುವುದಾದರೆ ನನ್ನೆಲ್ಲ ಚಿಂತೆಗಳೂ ಕರಗಿ ಹೋದವು. ಆದರೆ, ಆ ದನಿ ಕಿನ್ನರ ಕಿಂಪುರುಷರ ಎಂದಿನ ದನಿಯಂತಿರಲಿಲ್ಲ ಮಾತ್ರ!

ಆಮೇಲೆ ದಯೆ ತುಂಬಿದ ಕಣ್ಣುಗಳಿಂದ ತೃಪ್ತಿಯಲ್ಲಿ